**<u>ದಿನಾಂಕಃ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಪಾಟೀ ಸವಾಲುಃ ಶ್ರೀ ಬಿ.ಕೆ.ಹೆಚ್. ವಕೀಲರಿಂದ 2 ನೇ ಎದುರುದಾರರ ಪರವಾಗಿಃ-</u>***

ಸರ್ವೆ ನಂಬರ್ 221/ಎ ರಲ್ಲಿವ 17 ಗುಂಟೆ ಜಮೀನು ನನ್ನ ಹೆಂಡತಿಯದು/ಅರ್ಜಿದಾರಳದ್ದು. ನನ್ನ ಹೆಂಡತಿಗೆ ಮೂಣಕಾಲು ಚಿಕ್ಕು ಮರಜೊಡಣೆಯಾಗಿದೆ ಹಾಗೂ ಕನ್ನಡ ಮಾತನಾಡಲು ಬರುವುದಿಲ್ಲ ಆದ್ದರಿಂದ ವಿಶೇಷ ಅಧಿಕಾರ ಪತ್ರದಡಿ ಪ್ರತಿನಿಧಿಸುತ್ತಿದ್ದೇನೆ. ಈ ದಿನ ನ್ಯಾಯಾಲಯದ ಹೊರಗೆ ನನ್ನ ಹೆಂಡತಿ ಕುಳಿತ್ತಿದ್ದಾರೆ ಎಂದರೆ ಸರಿ. ಜಮೀನು ಚಕ್ಕು ಬಂಧಿ ಪೂರ್ವಕ್ಕೆ - ಕಾಶಿ ವಿಶ್ವನಾಥವರ ಜಮೀನು, ಪಶ್ಚಿಮಕ್ಕೆ - ನನ್ನ ಹೊಲವನ್ನು ವಿಜಯ ರಾಜೇಶ್ವರಿ ಎಂಬುವುವವರಿಗೆ ಕೊಟ್ಟ ಜಮೀನು, ಉತ್ತರಕ್ಕೆ -ಪಿ. ರಮಾದೇವಿಯವರ ಜಮೀನು ಮತ್ತು ದಕ್ಷಿಣಕ್ಕೆ - ಕಲ್ಲೂರು ಮಮದಾಪುರ ಡಾಂಬಾರು ರಸ್ತೆ. ನಮ್ಮ ಜಮೀನಿನ ಅಕ್ಕ ಪಕ್ಕ ನೀರಾವರಿ ಜಮೀನು ಇಲ್ಲ, ಬರಡು ಭೂಮಿ ಇದೆ ಎಂದರೆ ಸರಿಯಲ್ಲ. ಮಮದಾಪುರ ಗ್ರಾಮದಿಂದ ಮಾನವಿ ಗ್ರಾಮಕ್ಕೆ 20 ಕಿ ಮೀ ದೂರ ಇದೆ. ತುಂಗಭದ್ರ ಎಡದಂಡೆ ನಿರಾವರಿ ಯೋಜನೆ ನೀರಾವರಿ ಸೌಲಭ್ಯವು ಮಾನವಿವರೆಗೆ ಮಾತ್ರ ಇಧೆ ಮಮದಾಪೂರ ಗ್ರಾಮಕ್ಕೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಗಣೆಕಲ್ಲು ಗ್ರಾಮದಲ್ಲಿ 1 ಟಿ.ಎಂ.ಸಿ ಕೆರೆ ನಿರ್ಮಿಸಿದ್ದು ನೀರಾವರಿ ಸೌಲಭ್ಯ ಇದೆ ಎನ್ನುತ್ತಾರೆ. ಮಮದಾಪುರ ಗ್ರಾಮವು ರಾಯಚೂರಿಂದ 4 ರಿಂದ 5 ಕಿ. ಮೀ ಇದೆ. ಗಣೆಕಲ್ಲು ಕೆರೆಯ ನೀರು ಅಲ್ಲಿಯೇ ಸುತ್ತಮುತ್ತ 2 ಕಿ.ಮೀ ವರೆಗೆ ಮಾತ್ರ ಬಳಕೆಯಾಗುತ್ತಿದ್ದೆ ಎಂದರೆ ಸರಿಯಲ್ಲ. ಭೂ-ಸ್ವಾಧೀನದ ಸಾಲಿನ ಮಾರುಕಟ್ಟೆ ಧಾರಣೆಯಂತೆ ಭೂ-ಸ್ವಾಧೀನಾಧಿಕಾರಿ ಸೂಕ್ತ ಪರಿಹಾರ ಐತೀರ್ಪು ಮಾಡಿದ್ದಾರೆಂದರೆ ಸರಿಯಲ್ಲ. ಭೂ-ಸ್ವಾಧೀನಾಧಿಕಾರಿಯಿಂದ ನಮಗೆ ಯಾವುದೇ ನೋಟೀಸು ಬಂದಿಲ್ಲ.

ಭೂ-ಸ್ವಾಧೀನಾಧಿಕಾರಿ ಕಛೇರಿಯಲ್ಲಿ ವಿಚಾರಿಸಿಲ್ಲ. ನಮ್ಮ ಪರಿಹಾರದ ಅರ್ಜಿ ಕಾಲಮಿತಿಯಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣದಲ್ಲಿನ 5 ನೇ ಖಂಡಿಕೆಯಲ್ಲಿ ನಮ್ಮ ಪರಿಹಾರದ ಅರ್ಜಿಯು ಕಾಲಮಿತಿಯಲ್ಲಿ ಇಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಮ್ಮ ಜಮೀನು ಎಕರೆಗೆ 15 ಲಕ್ಷ ಬೆಲೆ ಬಾಳುವುದಕ್ಕೆ ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ.

***ಪಾಟೀ ಸವಾಲುಃ ಶ್ರೀ ಡಿ.ಜಿ.ಪಿ. ರವರಿಂದ 1 ನೇ ಎದುರುದಾರರ ಪರವಾಗಿಃ-***

ಭೂ-ಸ್ವಾಧೀನಾಧಿಕಾರಿ ನಮ್ಮ ಜಮೀನಿಗೆ ಬಂದು ಪರಿಶೀಲನೆ ಮಾಡಿ ಪರಿಹಾರ ನಿಗಧಿ ಪಡಿಸಿದ್ದರು ಎಂರೆ ಸರಿಯಲ್ಲ. ನಮ್ಮ ಜಮೀನು ಖುಷ್ಕಿ ಜಮೀನು ಎಂದರೆ ಸರಿಯಲ್ಲ. ಮಮದಾಪುರ ಗ್ರಾಮವು ತುಂಗಭದ್ರಾ ಎಡದಂಡೆ ನಾಲೆಯ ಕೊನೆಯ ಗ್ರಾಮವಾಗಿದ್ದು, ಕಾಲವೆ ನೀರು ಬಂದರೂ ಬರಬಹುದು ಬಾರದೆಯೂ ಇರಬಹುದು ಎಂದರೆ ಸರಿಯಲ್ಲ. ಕಾಲುವೆಯ ಆಧಾರದಲ್ಲಿ ಭತ್ತ ಬೆಳೆಯುತ್ತೇವೆ ಎಂಬುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**